ನವಿರುನವಿರಾದ, ಅಪರೂಪದ, ಮೇಲಿನಿಂದ ಕೆಳಗೆ ನಿಧಾನವಾಗಿ ಇಳಿಯುತ್ತಿದ್ದ, ನಾನು ಯಾವತ್ತೂ ಬಯಸುತ್ತಿದ್ದ ಸೂರ್ಯರಶ್ಮಿ ಯಾವಾಗಲೂ ಆ ಗಾಜಿನ ಹಿಂದೆಯೇ ನಿಂತು ಸುಟ್ಟು ಹೋಗುತ್ತಿತ್ತು. ಆ ಗಾಜೇ ಅದಕ್ಕೆ ಸಾವು; ನಮ್ಮಿಬ್ಬರನ್ನು ಪ್ರತ್ಯೇಕಿಸಿ ನಡುವೆ ನಿಂತುಕೊಂಡಿರುವ ಸಾವು; ನೂರಾರು ವರ್ಷಗಳ ಹಿಂದೆ ಮೊದಲು ಆ ಹೆಣ್ಣಿನ ಬಳಿ ಸುಳಿದು, ಮನೆಯಿಂದ ಹೊರಬಿದ್ದು, ಕಿಟಕಿ- ಬಾಗಿಲುಗಳನ್ನು ಮುಚ್ಚಿಬಿಟ್ಟಿತು; ಕೋಣೆಗಳಲ್ಲಿ ಕತ್ತಲು ಕವಿಯಿತು. ಅವನದನ್ನು ಬಿಟ್ಟು, ಅವಳನ್ನೂ ಬಿಟ್ಟು ಉತ್ತರಕ್ಕೆ ಓಡಿದ, ನಂತರ ಪೂರ್ವಕ್ಕೆ, ದಕ್ಷಿಣದ ಆಗಸದಲ್ಲಿ ಸಾಲುಸಾಲು ತಾರೆಗಳನ್ನು ಕಂಡ; ಮತ್ತೆ ಮನೆಯನ್ನು ಬಯಸಿ ಬಂದ. ಆದರೆ ಆ ನವಿರು ಆಗಲೇ ನೆಲದಡಿ ಸೇರಿಯಾಗಿತ್ತು.

'ಸುರಕ್ಷಿತವಾಗಿದೆ, ಸುರಕ್ಷಿತವಾಗಿದೆ, ಸುರಕ್ಷಿತವಾಗಿದೆ' ಮನೆಯ ನಾಡಿಬಡಿತ ಖುಷಿಯಿಂದ ಬಡಿದುಕೊಂಡಿತು.

'ನಿಧಿಯೀಗ ನಿಮ್ಮದು'

ಬೀದಿಯಲ್ಲಿ ಗಾಳಿ ಜೋರಾಗಿ ಬೀಸುತ್ತಿದೆ. ಮರಗಳು ಈ ಕಡೆಯೊಮ್ಮೆ, ಆ ಕಡೆಯೊಮ್ಮೆ ಬಾಗುತ್ತಿವೆ. ಬೆಳದಿಂಗಳು ಮಳೆಗೆ ಸಿಕ್ಕಿ ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿದೆ. ಆದರೆ ಕಿಟಕಿಯಿಂದ ದೀಪದ ಬೆಳಕು ನೇರವಾಗಿ ಬೀಳುತ್ತಿದೆ. ಮೋಂಬತ್ತಿ ದೃಢವಾಗಿ, ಸ್ಥಿರವಾಗಿ ಉರಿಯುತ್ತಿದೆ. ಮನೆಯಿಡೀ ಅಲೆದಾಡುತ್ತ, ಕಿಟಕಿಗಳನ್ನು ತೆರೆಯುತ್ತ, ನಮ್ಮನ್ನು ಎಬ್ಬಿಸಬೇಡಿ ಎಂದು ಪಿಸುಗುಟ್ಟುತ್ತ, ದೆವ್ವ ದಂಪತಿಗಳು ತಮ್ಮ ಸಂತೋಷವನ್ನು ಅರಸುತ್ತಿದ್ದಾರೆ.

'ನಾವಿಲ್ಲಿ ಮಲಗಿದ್ದೆವು' ಎಂದವಳು ಹೇಳಿದರೆ, 'ಲೆಕ್ಕವಿಡದಷ್ಟು ಸಿಹಿಮುತ್ತುಗಳು' ಎಂದು ಸೇರಿಸುತ್ತಾನೆ. 'ಬೆಳಬೆಳಗ್ಗೆ ಎದ್ದು...' 'ಮರಗಳ ನಡುವೆ ತೂರಿಬರುವ ಬೆಳದಿಂಗಳ ಬೆಳಕಿನಲ್ಲಿ' 'ಅಟ್ಟದ ಮೇಲೆ' 'ಕೈತೋಟದಲ್ಲಿ' 'ಬೇಸಿಗೆಯ ಬಿಸಿಯಲ್ಲಿ' 'ಚಳಿಗಾಲದ ಹಿಮದಲ್ಲಿ'.

ದೂರದಲ್ಲಿ ಬಾಗಿಲುಗಳು ತೆರೆದು ಮುಚ್ಚಿಕೊಳ್ಳುತ್ತವೆ, ಹೃದಯದ ಬಡಿತದಂತೆ ಮೃದುವಾಗಿ ಬಡಿದುಕೊಳ್ಳುತ್ತವೆ.

ಅವರು ಇನ್ನೂ ಹತ್ತಿರ ಬರುತ್ತಾರೆ; ಬಾಗಿಲಲ್ಲಿ ನಿಲ್ಲುತ್ತಾರೆ. ತಂಗಾಳಿ ಬೀಸುತ್ತದೆ, ಬೆಳ್ಳಿಯ ತೆಳುಲೇಪದ ಹಾಗೆ ಮಳೆ ಗಾಜಿನ ಮೇಲೆ ಜಾರಿ ಬೀಳುತ್ತದೆ. ನಮ್ಮ ಕಣ್ಣುಗಳು ಮಂಜಾಗುತ್ತವೆ; ಸನಿಹ ಯಾವುದೇ ಹೆಜ್ಜೆಗಳ ಸದ್ದಿಲ್ಲ; ಯಾವ ಹೆಣ್ಣೂ ತನ್ನ ದೆವ್ವದ ಮೇಲಂಗಿ ಹರಡುವುದನ್ನು ನಾವು ಕಾಣುವುದಿಲ್ಲ. ಅವನ ಕೈಗಳು ಲಾಟೀನನ್ನು ಮರೆಮಾಡುತ್ತವೆ. ಅವನು ಮೆಲ್ಲಗೆ ಉಸುರುತ್ತಾನೆ. 'ನೋಡಲ್ಲಿ, ಅವರು ಗಾಢ ನಿದ್ರೆಯಲ್ಲಿ ಇದ್ದಾರೆ. ಅವರ ತುಟಿಗಳ ಮೇಲೆ ಪ್ರೀತಿ ಹೊರಸೂಸುತ್ತಿದೆ.'

ಅವರು ಬಾಗಿ, ನಮ್ಮ ಮೇಲೆ ತಮ್ಮ ಬೆಳ್ಳಿದೀಪ ಹಿಡಿದು, ದೀರ್ಘಕಾಲ ದಿಟ್ಟಿಸಿ ನೋಡುತ್ತಾರೆ. ಅವರು ಬಹುಕಾಲ ಸ್ತಬ್ಧರಾಗಿ ನಿಲ್ಲುತ್ತಾರೆ. ಗಾಳಿ ನೇರವಾಗಿ ಚಲಿಸುತ್ತದೆ; ದೀಪದ ಜ್ವಾಲೆ ಸ್ವಲ್ಪ ಬಾಗುತ್ತದೆ. ಬೆಳದಿಂಗಳ ಉನ್ಮತ್ತ ಕಿರಣಗಳು ನೆಲ ಮತ್ತು ಗೋಡೆ ಎರಡನ್ನೂ ದಾಟಿ ಅವರನ್ನು ತಬ್ಬುತ್ತವೆ; ಬಾಗಿದ ಅವರ ಮುಖಗಳ ಮೇಲೆ ಓಕುಳಿಯಾಡುತ್ತವೆ. ಓಹ್, ಅವು ಸದಾ ಕಳಕಳಿಯಿಂದ ಮರುಗುವ ಮುಖಗಳು; ಮಲಗಿದ್ದವರನ್ನು ಹುಡುಕಿ ಅವರಲ್ಲಿ ಅಡಗಿರುವ ಸಂತೋಷವನ್ನು ಅರಸುವ ಮುಖಗಳು.

'ಸುರಕ್ಷಿತವಾಗಿದೆ, ಸುರಕ್ಷಿತವಾಗಿದೆ, ಸುರಕ್ಷಿತವಾಗಿದೆ' ಮನೆಯ ಹೃದಯವು ಹೆಮ್ಮೆಯಿಂದ ಬಡಿಯುತ್ತದೆ.

'ಎಷ್ಟೊಂದು ವರ್ಷಗಳು' ಅವನು ನಿಟ್ಟುಸಿರು ಬಿಡುತ್ತಾನೆ. 'ಮತ್ತೆ ನೀನು ನನ್ನನ್ನು ಕಂಡುಕೊಂಡೆ' 'ಇಲ್ಲಿಯೇ' ಅವಳು ಮೆಲು ನುಡಿಯುತ್ತಾಳೆ, 'ಮಲಗುತ್ತ; ತೋಟದಲ್ಲಿ ಓದುತ್ತ; ನಗುತ್ತ, ಅಟ್ಟದಲ್ಲಿ ಸೇಬುಗಳನ್ನು ಉರುಳಿಸುತ್ತ. ನಮ್ಮ ನಿಧಿಯನ್ನು ನಾವು ಇಲ್ಲಿಯೇ ಬಿಟ್ಟಿದ್ದೇವೆ' ಬಾಗುತ್ತಾ, ಅವರ ಕಾಂತಿ ನನ್ನ ಕಣ್ಣ ರೆಪ್ಪೆಗಳನ್ನು ಮೇಲೆತ್ತುತ್ತದೆ.

'ಸುರಕ್ಷಿತವಾಗಿದೆ! ಸುರಕ್ಷಿತವಾಗಿದೆ! ಸುರಕ್ಷಿತವಾಗಿದೆ' ಮನೆಯ ನಾಡಿಮಿಡಿತವು ಹುಚ್ಚುಚ್ಚಾಗಿ ಬಡಬಡಿಸುತ್ತದೆ.

ಎಚ್ಚರವಾಗುತ್ತ ನಾನು, 'ಓಹ್, ಎದೆಯೊಳಗಿನ ಬೆಳಕು. ಇದು ನೀವು ಹುಗಿದಿಟ್ಟ ನಿಧಿಯೇ?' ಎಂದು ಅರಚುತ್ತೇನೆ.

●

